ಮೈಸೂರು ಕೃಷ್ಣರಾಜಸಾಗರ ಸೇರುವ ರಸ್ತೆಯನ್ನು ಅಗಲ ಮಾಡುವ ಬಗ್ಗೆ

೧೬೮೮. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದಿಂದ ಕೃಷ್ಣರಾಜ ಸಾಗರವನ್ನು ಸೇರುವ ರಸ್ತೆಯು ಇಬ್ಬದಿಯಲ್ಲಿ ಅನೇಕ ಕೈಗಾರಿಕೆಗಳು ಪ್ರಾರಂಭವಾದಾಗಿನಿಂದ ಪ್ರತಿ ನಿತ್ಯವೂ ಸಾವಿರಾರು ವಾಹನಗಳು ಓಡಾಡುತ್ತಿದ್ದು ರಸ್ತೆ ಕಿರಿದಾಗಿರುವುದರಿಂದ ಅನೇಕ ಅಪಘಾತಗಳು ಆಗಿಂದಾಗ್ಗೆ ಸಂಭವಿಸುತ್ತಿಲ್ಲವೇ ?

ಆ) ರಸ್ತೆಯನ್ನು ಅಗಲ ಮಾಡುವುದಲ್ಲದೆ ಅದನ್ನು ಎರಡು ಭಾಗ ಮಾಡಿ, ಹೋಗಿ ಬರುವ ವಾಹನಗಳು ಪ್ರತ್ಯೇಕವಾದ ರೀತಿಯಲ್ಲಿ ಚಲಿಸುವಂತೆ ಮಾಡುವುದಲ್ಲದೆ ಕಾರ್ಖಾನೆಗಳು ಮತ್ತು ಗ್ರಾಮಗಳಲ್ಲಿರುವಲ್ಲಿ ಪಾದಚಾರಿಗಳು ರಸ್ತೆ ದಾಟುವ ಕ್ರಮವನ್ನು ನಿಗದಿ ಪಡಿಸುವರೇ ?

ಇ) ಈ ಬಗ್ಗೆ ಮಾನವಿಗಳು ಬಂದಿವೆಯೆ ?

ಈ) ಹಾಗಿದ್ದಲ್ಲಿ ಆದಷ್ಟು ತ್ವರಿತವಾಗಿ ಸರಕಾರದವರು ಈ ಬಗ್ಗೆ ಕೆಲಸ ಕೈಗೊಂಡು ಸಂಭವಿಸುತ್ತಿರುವ ಘಟನೆಗಳನ್ನು ತಪ್ಪಿಸುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಮತ್ತು ಆ) ಈ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಾಗಿದ್ದು, ರಸ್ತೆಗೆ ಅಭಿವೃದ್ಧಿ ಮಾಡುವ ಅವಶ್ಯಕತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಬಂದಿವೆ.

ಈ) ಆರ್ಥಿಕ ಲಭ್ಯತೆಯನ್ನಾಧರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಹೊಸದುರ್ಗ ತಾಲ್ಲೂಕಿನಲ್ಲಿ ಸರಕಾರಿ ಶಾಲೆಗಳ ಬಗ್ಗೆ

೧೫೮೨. ಶ್ರೀ ಬಿ. ರಾಮದಾಸ (ಹೊಸದುರ್ಗ),—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿವೆ ? ಇವುಗಳಲ್ಲಿ ಇಂಗ್ಲೀಷ್ ಮೀಡಿಯಂ ಶಾಲೆಗಳೆಷ್ಟು ?

ಆ) ಈ ಎಲ್ಲ ಶಾಲೆಗಳಿಗೆ ಕೊಠಡಿಗಳಿವೆಯೇ ? ಹಾಗೂ ಎಲ್ಲ ಶಾಲೆಗಳಿಗೂ ವಿದ್ಯಾರ್ಥಿಗಳ ಪ್ರಮಾಣಕ್ಕೆ ಅನುಗುಣವಾಗಿ ಶಿಕ್ಷಕರಿದ್ದಾರೆಯೇ ?

ಇ) ಹೊಸದುರ್ಗ ತಾಲ್ಲೂಕಿನಲ್ಲಿ ಹೊಸ ಸರ್ಕಾರಿ ಶಾಲೆಗಳನ್ನು ಆರಂಭಿಸಲು ಸರ್ಕಾರವು ಉದ್ದೇಶಿಸಿದೆಯೇ ? ಶಿಕ್ಷಕರಿಲ್ಲದ ಹಾಗೂ ಕಟ್ಟಡಗಳಿಲ್ಲದ ಕಡೆ ಎಷ್ಟು ದಿನಗಳಲ್ಲಿ ಶಿಕ್ಷಕರನ್ನು ನೇಮಿಸಲಾಗುವುದು ಹಾಗೂ ಕಟ್ಟಡವನ್ನು ಒದಗಿಸಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೊಸದುರ್ಗ ತಾಲ್ಲೂಕಿನಲ್ಲಿರುವ ಶಾಲೆಗಳ ಸಂಖ್ಯೆ ಈ ಕೆಳಕಂಡಂತಿದೆ.—

೧)	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು	೧೫೧
೨)	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು	೭೭
೩)	ಇಂಗ್ಲೀಷ್ ಮೀಡಿಯಂ ಶಾಲೆಗಳು ಇರುವುದಿಲ್ಲ.	

ಆ) ಇದೆ.
ಇಲ್ಲ. ೨೫ ಹೆಚ್ಚಿನ ಶಿಕ್ಷಕರ ಅಗತ್ಯವಿದೆ.

ಇ) ಹೊಸ ಸರ್ಕಾರಿ ಶಾಲೆಗಳನ್ನು ಆರಂಭಿಸಂವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮಂ ಕೈಗೊಳ್ಳಲಾಗುವುದು. ಹೊಸ ಕಟ್ಟಡ ಒದಗಿಸಂವ ಅಗತ್ಯವಿಲ್ಲ. ಶಿಕ್ಷಕರ ಖಾಲಿ ಹುದ್ದೆಗಳನ್ನು ಜಿಲ್ಲಾ ನೇಮಂಕಾತಿ ಸಮಿತಿ ಮೂಲಕ ಭರ್ತಿ ಮಾಡಲಂ ಕ್ರಮಂ ಕೈಗೊಳ್ಳಲಾಗುವುದು.

ತೋಟಗಾರಿಕೆ ಫಾರಂಗಳ ಬಗ್ಗೆ

೧೧೩೮. ಶ್ರೀ ಜಿ. ಎಸ್. ಶಿವನಂಜಪ್ಪ, (ಗುಬ್ಬಿ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳಲ್ಲಿ ತೋಟಗಾರಿಕೆ ಫಾರಂಗಳಂ ಇವೆ, ಹಾಗೂ ಎಷ್ಟು ವರ್ಷಗಳಿಂದ ಇವೆ;

ಆ) ೧೯೮೪-೮೫ ರಿಂದ ೧೯೮೬-೮೭ರ ವರೆವಿಗೆ ಪ್ರತಿಯೊಂದು ಫಾರಂನ ಆದಾಯ ವೆಚ್ಚವೆಷ್ಟು?

ಇ) ಮಂಹಾರಾಷ್ಟ್ರದಲ್ಲಿ ಒಣ ಬೇಸಾಯದ ಪದ್ಧತಿಯಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸಿ ಫಾರಂಗಳನ್ನು ಹೂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಸದರಿ ಮಾದರಿಯ ಫಾರಂಗಳನ್ನು ನಮ್ಮ ರಾಜ್ಯದಲ್ಲಿಯೂ ಮಾಡಲಾಗುವುದೇ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ವಿವರಗಳನ್ನು ಅನುಬಂಧ 'ಅ' ದಲ್ಲಿ ಒದಗಿಸಲಾಗಿದೆ.

ಆ) ವಿವರಗಳನ್ನು ಅನುಬಂಧ 'ಆ' ದಲ್ಲಿ ಒದಗಿಸಲಾಗಿದೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಇಂತಹ ಒಣ ಬೇಸಾಯ ಪದ್ಧತಿಯಲ್ಲಿ ತೋಟಗಾರಿಕಾ ಕ್ಷೇತ್ರಗಳನ್ನು ಸ್ಥಾಪನೆ ಮಾಡಿ ಫಸಲು ಸಹ ಬಂದಿರುತ್ತದೆ. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ, ದೊಡ್ಡ ಸಾಗರೆ, ಮತ್ತು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಹೊಗಳಗೆರೆ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮಲ್ಲಸಂದ್ರ ಕಾವಲ್ ಮುಂತಾದ ತೋಟಗಾರಿಕಾ ಕ್ಷೇತ್ರಗಳಲ್ಲಿ ಒಣ ಬೇಸಾಯ ಪದ್ಧತಿಯಲ್ಲಿಯೇ ಅಭಿವೃದ್ಧಿಗೊಳಿಸಿ ಈಗ ಹಾಲಿ ಫಸಲು ನೀಡುತ್ತಿದೆ.